ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಮೂರನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001.
**E-mail ID: icps.kar@gmail.com**

ಸಂಖ್ಯೆ: ಕೆಎಸ್ಐಸಿಪಿಎಸ್/ಮರ/ಮ.ಕ.ಸಗೆ/ಅನುದಾನ ಬಿಡುಗಡೆ/92/2020-21 ದಿ:01.03.2021

**ಸುತ್ತೋಲೆ**

ವಿಷಯ: ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಗೆ ಒದಗಿಸಲಾದ ಮಕ್ಕಳ ಸಂಬಂಧಿ ಹಾಗೂ ಸಾದಿಲ್ವಾರು ಅನುದಾನವನ್ನು ಉಪಯೋಗಿಸುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಉಲ್ಲೇಖ: ನಿರ್ದೇಶನಾಲಯದ ಆದೇಶ ಸಂಖ್ಯೆ:ಐಸಿಪಿಎಸ್/ಮರ/ಮಕಸ/ಅನುದಾನ ಬಿಡುಗಡೆ/59/ 2020-21, ದಿನಾಂಕ:17-11-2020.

* * * * *

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಗಳಿಗೆ ಮಕ್ಕಳ ಸಂಬಂಧಿ ಖರ್ಚುಗಳಿಗಾಗಿ ಹಾಗೂ ಸಾದಿಲ್ವಾರು ವೆಚ್ಚಗಳಿಗಾಗಿ ಈ ಕೆಳಗಿನಂತೆ ಅನುದಾನ ನಿಗಧಿಪಡಿಸಿದೆ.

1. **Child related expenses:** including medicine, transportation, food, etc. during the process of production of a child to the committee @ Rs.6,000 per month (Subject to actuals) Rs.72,000/- p.a.
2. **Contingency:** (water, electricity, telephone, stationary, Photocopy, postage, local travel, etc.) @ Rs.5,000 per month (Subject to actuals) Rs 60,000/- p.a.

ಮಕ್ಕಳ ಸಂಬಂಧಿ ಹಾಗೂ ಸಾದಿಲ್ವಾರು ಮೊತ್ತವನ್ನು ಕೆಳಕಂಡ ವೆಚ್ಚಗಳಿಗಾಗಿ ಉಪಯೋಗಿಸಬಹುದಾಗಿದೆ.

1. **ಮಕ್ಕಳ ಸಂಬಂಧಿ ಅನುದಾನ**: ಸದರಿ ಮೊತ್ತವನ್ನು ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಯ ಮುಂದೆ ಹಾಜರಾಗುವ ಮಗುವಿಗಾಗಿ ಕೆಳಕಂಡ ಸಂದರ್ಭಗಳಿಗಾಗಿ ಉಪಯೋಗಿಸಬಹುದಾಗಿದೆ:-

   - ಔಷದೋಪಚಾರದ ಅಗತ್ಯ ಕಂಡು ಬಂದಲ್ಲಿ ಔಷಧಿ ಖರೀದಿಗಾಗಿ ಹಣ ನೀಡುವುದು ಅಥವಾ ವೈದ್ಯರ ಶಿಫಾರಸ್ಸಿನಂತೆ ಔಷಧ ಖರೀದಿಸಿ ನೀಡುವುದು.
   - ಮಗು ವಿಚಾರಣೆ ದಿನ ಹಾಜರಾಗಲು ಹಣಕಾಸಿನ ತೊಂದರೆ ಕಂಡು ಬಂದಲ್ಲಿ, ಸಮಿತಿ/ಮಂಡಳಿಗೆ ಬಂದು ಹೋಗುವ ವಾಸ್ತವ ಪ್ರಯಾಣದ ವೆಚ್ಚ ನೀಡಬಹುದಾಗಿದೆ.
   - ವಿಚಾರಣೆಗೆ ಹಾಜರಾದ ಮಗು ಸಾಯಂಕಾಲದವರೆಗೆ ಇದ್ದಲ್ಲಿ ಮದ್ಯಾಹ್ನದ ಊಟದ ವೆಚ್ಚ ಅಥವಾ ಊಟ ಒದಗಿಸಬಹುದಾಗಿದೆ.
   - ವೀಕ್ಷಣಾಲಯ ಇಲ್ಲದ ಜಿಲ್ಲೆಯ ಮಗು ತಾತ್ಕಾಲಿಕವಾಗಿ ಬಾಲನ್ಯಾಯ ಮಂಡಳಿಯ ಆದೇಶದನ್ವಯ ಪಕ್ಕದ ಜಿಲ್ಲೆಯ ವೀಕ್ಷಣಾಲಯದಲ್ಲಿ ಅಭಿರಕ್ಷಣೆಯಲ್ಲಿದ್ದರೆ, ವಿಚಾರಣೆ ದಿನದಂದು ಮಗುವನ್ನು ಕರೆತರಲು ಪ್ರಯಾಣದ ವೆಚ್ಚ ಭರಿಸಬಹುದಾಗಿದೆ. (ರೈಲ್ವೆ ವಾರೆಂಟ್ ಅಥವಾ ಬಸ್ ವಾರೆಂಟ್ ಇಲ್ಲದಿದ್ದಲ್ಲಿ)
   - ಮಗುವಿನ ಪೋಷಕರನ್ನು ತುರ್ತು ವಿಷಯದ ಕಾರಣ (ಮರಣ ಹೊಂದಿದ್ದಲ್ಲಿ, ಅಪಘಾತ ಕಾರಣ, ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿದ್ದಲ್ಲಿ, ತೀವ್ರ ಅನಾರೋಗ್ಯ ಪೀಡಿತರಾಗಿದ್ದು ಮಗುವನ್ನು ನೋಡಬೇಕೆಂದು ಬಯಸಿದ್ದಲ್ಲಿ) ಭೇಟಿ ಮಾಡಲು ಪ್ರಯಾಣದ ವೆಚ್ಚವನ್ನು ಮಗು ಹಾಗೂ ಎಸ್ಕಾರ್ಟ್ ಸಿಬ್ಬಂದಿಗೆ ನೀಡಬಹುದಾಗಿದೆ.

- ಬಾಲನ್ಯಾಯ ಮಂಡಳಿ ಮುಂದೆ ಹಾಜರಾಗುವ ಸಾಕ್ಷಿದಾರರಿಗೆ ವಾಸ್ತವ ಪ್ರಯಾಣ ವೆಚ್ಚ ನೀಡಬಹುದಾಗಿದೆ (ಬಸ್/ ರೈಲು ಸಾಮಾನ್ಯ ದರ್ಜೆ)
- ಬಸ್ ನಿಲ್ದಾಣ/ರೈಲ್ವೆ ನಿಲ್ದಾಣ ಅಥವಾ ಇತರೆ ಸ್ಥಳಗಳಿಂದ ರಕ್ಷಣೆ ಮಾಡಿದ ಮಗುವನ್ನು /ಮಕ್ಕಳನ್ನು ಕರೆತರಲು ವಾಹನ ಬಾಡಿಗೆ ವೆಚ್ಚ ಭರಿಸಬಹುದು.
- ಮಗುವಿನ ತುರ್ತು ವೈದ್ಯಕೀಯ ಚಿಕಿತ್ಸೆಗಾಗಿ ವೆಚ್ಚ ಭರಿಸಬಹುದು.
- ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರುಪಡಿಸುವಲ್ಲಿ ಬಡ ಮಕ್ಕಳ ಬಟ್ಟೆ ಸರಿಯಾಗಿಯಿಲ್ಲದಿರುವ ಹಾಗೂ ಸ್ವಚ್ಚತೆ ಇಲ್ಲದಿರುವ ಪ್ರಸಂಗಗಳಲ್ಲಿ ಹೊಸ ಬಟ್ಟೆ ಖರೀದಿ ಹಾಗೂ ಸ್ನಾನಕ್ಕಾಗಿ / ಸ್ನಾನ ಮಾಡಿಸಲು ಬೇಕಾದ ಸಾಮಗ್ರಿ ಖರೀದಿಗಾಗಿ ವೆಚ್ಚಗಳನ್ನು ಭರಿಸಬಹುದು.

**ವಿ.ಸೂ:** ಮೇಲಿನ ಎಲ್ಲಾ ವೆಚ್ಚಗಳು ವಿಚಾರಣೆ ಹಂತದಲ್ಲಿ ಇರುವ, ಸ್ವಾಗತ ಘಟಕದಲ್ಲಿರುವ ಮಕ್ಕಳಿಗೆ ಅನ್ವಯಿಸುತ್ತದೆ.

2. **ಸಾದಿಲ್ವಾರು:** ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಯು ಸಾದಿಲ್ವಾರು ಅಡಿ ಒದಗಿಸಿರುವ ಅನುದಾನವನ್ನು ಕೆಳಕಂಡಂತೆ ವೆಚ್ಚ ಭರಿಸಬಹುದಾಗಿದೆ:-

   - ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿ ಪ್ರತ್ಯೇಕ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ನೀರು, ವಿದ್ಯುಚ್ಛಕ್ತಿ ಬಿಲ್ಲುಗಳನ್ನು ಪಾವತಿಸಬಹುದು. ಒಂದು ವೇಳೆ ಬಾಲಮಂದಿರ/ವೀಕ್ಷಣಾಲಯ ಆವರಣದಲ್ಲಿ ನಡೆಯುತ್ತಿದ್ದಲ್ಲಿ ಒಂದೆರಡು ತಿಂಗಳ ಬಿಲ್ಲು ಅಗತ್ಯ ಬಿದ್ದಲ್ಲಿ ಪಾವತಿಸಬಹುದು (ಸಾಮಾನ್ಯವಾಗಿ ಏಪ್ರಿಲ್, ಮೇ ತಿಂಗಳುಗಳಲ್ಲಿ)
   - ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಗೆ ಪ್ರತ್ಯೇಕ ದೂರವಾಣಿ ಇದ್ದಲ್ಲಿ ಅದರ ಬಿಲ್ಲು ಪಾವತಿಸಬಹುದು. ಮಕ್ಕಳ ಕಲ್ಯಾಣ ಸಮಿತಿ/ಬಾಲನ್ಯಾಯ ಮಂಡಳಿಗೆ ಮೊಬೈಲ್ ಸಿಮ್ ಪಡೆಯಲು ಅನುಮತಿ ನೀಡಿದ್ದು, ಇಲಾಖೆಯಿಂದ ನಿಗದಿಪಡಿಸಿರುವ ಮೊತ್ತವನ್ನು ರೀಚಾರ್ಜ್ ಮಾಡಿಸಲು ಬಳಸಬಹುದು.
   - ಮಕ್ಕಳ ಕಲ್ಯಾಣ ಸಮಿತಿ ಹಾಗೂ ಬಾಲನ್ಯಾಯ ಮಂಡಳಿಗೆ ಅಗತ್ಯವಾದ ಲೇಖನ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸಬಹುದು.
   - ಅಗತ್ಯವಾದ ದಾಖಲೆಗಳನ್ನು ಜೆರಾಕ್ಸ್ ಮಾಡಿಸಲು ವೆಚ್ಚ ಮಾಡಬಹುದಾಗಿದೆ.
   - ಒಂದು ವೇಳೆ ದಾಖಲೆಗಳ ಪ್ರಿಂಟ್ ಜೆರಾಕ್ಸ್ ಬಾಲಮಂದಿರ/ವೀಕ್ಷಣಾಲಯದಿಂದ ಮಾಡಿಸುತ್ತಿದ್ದಲ್ಲಿ ಅಗತ್ಯಬಿದ್ದಲ್ಲಿ ಪ್ರಿಂಟರ್/ಜೆರಾಕ್ಸ್, ಕಾಟ್ರಿಡ್ಜ್ ಹಾಗೂ ಪ್ರಿಂಟರ್/ಜೆರಾಕ್ಸ್ ಪೇಪರ್ ಒದಗಿಸಲು ವೆಚ್ಚ ಮಾಡಬಹುದಾಗಿದೆ.
   - ಪತ್ರಗಳನ್ನು ರವಾನಿಸಲು ಅಂಚೆ ವೆಚ್ಚ / ಕೊರಿಯರ್ ವೆಚ್ಚ ಭರಿಸಬಹುದು.
   - ಮಕ್ಕಳ ಕಲ್ಯಾಣ ಸಮಿತಿ /ಬಾಲನ್ಯಾಯ ಮಂಡಳಿ ಅಧ್ಯಕ್ಷರು ಹಾಗೂ ಸದಸ್ಯರುಗಳು, ಸ್ಥಳೀಯ ಓಡಾಟದ ವೆಚ್ಚಕ್ಕಾಗಿ ಭರಿಸಬಹುದು ಉದಾ:ಮಗು ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಭೇಟಿ ಮಾಡಲು, ಜೈಲ್‌ಗೆ ಭೇಟಿ ಮಾಡಲು, ನ್ಯಾಯಾಲಯಕ್ಕೆ ಹೋಗಬೇಕಾದಲ್ಲಿ, ಯಾವುದಾದರು ಸ್ಥಳೀಯ ಮಕ್ಕಳ ಪಾಲನಾ ಸಂಸ್ಥೆ ಮೇಲೆ ದೂರು ಬಂದಿದ್ದಲ್ಲಿ ವಿಚಾರಣೆ ಮಾಡಲು, ಎಸ್‌ಜೆಪಿಯು ಅಥವಾ ಪೋಲೀಸ್ ಠಾಣೆಗೆ ಭೇಟಿ ನೀಡಲು, ವಿಶೇಷ ದತ್ತು ಏಜೆನ್ಸಿಯಲ್ಲಿ ಸರೆಂಡರ್ ಸ್ಟೇಟ್‌ಮೆಂಟ್ ಪಡೆಯಬೇಕಾದಲ್ಲಿ (ತಾಯಿ ಮಗು ಮಕ್ಕಳ ಕಲ್ಯಾಣ ಸಮಿತಿಗೆ ಬರುವ ಸ್ಥಿತಿಯಲ್ಲಿ ಇಲ್ಲದ ಸಂದರ್ಭಗಳಲ್ಲಿ) ವಾಸ್ತವ ಆಟೋ/ಊಬರ್/ಓಲಾ ವೆಚ್ಚ ಭರಿಸಬಹುದಾಗಿದೆ.

- ಮೇಲೆ ತಿಳಿಸಿರುವ ವೆಚ್ಚಗಳಲ್ಲದೇ ಮಗುವಿನ ಪಾಲನೆ ಮತ್ತು ರಕ್ಷಣೆಯ ಸಲುವಾಗಿ ಬಾಲನ್ಯಾಯ ಕಾಯ್ದೆ, 2015 ಪ್ರಕಾರ ಅವಶ್ಯಕವೆಂದು ಬಾಲನ್ಯಾಯ ಮಂಡಳಿ ಮತ್ತು ಮಕ್ಕಳ ಕಲ್ಯಾಣ ಸಮಿತಿಗಳ ವಿವೇಚನೆಗೆ ಅನಿಸಿದ್ದಲ್ಲಿ ಆ ವೆಚ್ಚಗಳನ್ನು KTPP Act ನಿಯಮಗಳನ್ನು ಅನುಸರಿಸಿಕೊಂಡು ಭರಿಸಬಹುದಾಗಿದೆ.

01.03.2021

ನಿರ್ದೇಶಕರು,
ಮಕ್ಕಳ ರಕ್ಷಣಾ ನಿರ್ದೇಶನಾಲಯ,
ಬೆಂಗಳೂರು.

**ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.:-**

1. ಬಾಲನ್ಯಾಯ ಮಂಡಳಿ, ಸದಸ್ಯರು, ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ
2. ಅಧ್ಯಕ್ಷರು ಮತ್ತು ಸದಸ್ಯರು ಮಕ್ಕಳ ಕಲ್ಯಾಣ ಸಮಿತಿ ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ
3. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ
4. ಎಲ್ಲಾ ಸರ್ಕಾರಿ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗಳು ಎಲ್ಲಾ ಜಿಲ್ಲೆಗಳು ಇವರಿಗೆ ಮಾಹಿತಿಗಾಗಿ

V.E/P/Circular